10) ಅಧ್ಯಕ್ಷರ ಅಪ್ಪಣೆ ಮೇರೆಗೆ

ಅ) ಭಾಲ್ಕಿಯಲ್ಲಿ ನಡೆದಂಥ ಬಿ.ಜೆ.ಪಿ. ಕಾರ್ಯಕರ್ತ ಶ್ರೀ ಸುರೇಶ್ ಖೇಡ್ ಎಂಬುವವರ ಕೊಲೆ ಪ್ರಕರಣ ಕುರಿತು.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಗೃಹಮಂತ್ರಿಗಳು ಇಲ್ಲಿದ್ದಾರೆ. ಭಾಲ್ಕಿಯಲ್ಲಿ ನಡೆದ ಘಟನೆ ಬಗ್ಗೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಮೇ ತಿಂಗಳಲ್ಲಿ ಭಾಲ್ಕಿಯಲ್ಲಿ ಸುರೇಶ್ ಖೇಡ್ ಅಂತ ಹೇಳಿ ಭಾರತೀಯ ಜನತಾಪಾರ್ಟಿ ಕಾರ್ಯಕರ್ತರ ಮರ್ಡರ್ ಆಯಿತು. ಪ್ರಕಾಶ್ ಖಂಡ್ರೆಯವರ ಏನು ಚುನಾವಣಾ ಪಿಟಿಶನ್ ಇತ್ತು ಅದು ಹೈಕೋರ್ಟಿನಲ್ಲಿ ಅವರ ವಿರುದ್ಧ ಆಗಿತ್ತು. ನಂತರ ಸುಪ್ರೀಂ ಕೋರ್ಟಿನಲ್ಲಿ ಅವರ ಪರ ಆಯಿತು. ಅದರ ಸಲುವಾಗಿ ಅವತ್ತು ಏನು ವಿಜಯೋತ್ಸವ ಕಾರ್ಯಕ್ರಮ ಆಯಿತು, ಈ ಸಂದರ್ಭದಲ್ಲಿ ಭಾರತೀಯ ಜನತಾಪಾರ್ಟಿಯ ಕಾರ್ಯಕರ್ತರಾದ ಸುರೇಶ್ ಖೇಡ್ ಎನ್ನುವಾತನ ಮರ್ಡರ್ ಭಾಲ್ಕಿಯಲ್ಲಿ ಆಯಿತು. ಬಹಳ ದೊಡ್ಡದಾದ ದುರಂತ ಆಯಿತು. ಆ ದುರಂತ ಆದಮೇಲೆ ನಮ್ಮ ಶಾಸಕರಾದ ಪ್ರಕಾಶ್ ಖಂಡ್ರೆಯವರು ಏನಿದ್ದಾರೆ. ಅವರ ಸಹೋದರರ ಮೇಲೂ ಹಲ್ಲೆಯಾಯಿತು. ಸುಭಾಶ್ ಖಂಡ್ರೆ ಅಂತ ಅವರ ಹೆಸರು. ಅವರ ಮೇಲೆ ಮಾರಣಾಂತಿಕ ಹಲ್ಲೆಯಾಯಿತು. ಆಸ್ಪತ್ರೆಯಲ್ಲಿ ಅವರು ಅಡ್ಮಿಟ್ ಆಗಿ ಉಪಚಾರ ತೆಗೆದುಕೊಂಡ ನಂತರ, ಅತನ ಜೀವಕ್ಕೆ ಯಾವುದೇ ಅಪಾಯ ಇಲ್ಲದೆ ಅವರು ಪಾರಾಗಿ ಬಂದರು. ಆದರೆ ಒಬ್ಬ ಕಾರ್ಯಕರ್ತನ ಮರ್ಡರ್ ಆದ ಮೇಲೆ, ಅಲ್ಲಿ ಭಾಲ್ಕಿಯಲ್ಲಿ ಇವತ್ತಿಗೂ ಪರಿಸ್ಥಿತಿ ಏನಿದೆ ಎಂದರೆ ಒಂದು ಹೆದರಿಕೆಯ ವಾತಾವರಣ ನಿರ್ಮಾಣವಾಗಿದೆ. ಇದಕ್ಕೆ ಮುಖ್ಯ ಕಾರಣ ಏಂದರೆ ಈ ಮರ್ಡರ್ ಕೇಸಿನಲ್ಲಿ ಐದು ಜನ ಆರೋಪಿಗಳು ಇದ್ದಾರೆ. ಅವರಲ್ಲಿ ಒಬ್ಬರು ಮಾಜಿ ಶಾಸಕರಿದ್ದಾರೆ, ಇನ್ನೊಬ್ಬರು ಮಾಜಿ ಮಂತ್ರಿಗಳ ಮಗ ಈ ಇಬ್ಬರು ಆರೋಪಿಗಳು ಇದ್ದಾರೆ. ಮತ್ತು ಮೂರು ಜನ ಇನ್ನಿತರ ಪ್ರಮುಖರು ಇದ್ದಾರೆ. ಒಟ್ಟು ಐದು ಜನ ಆರೋಪಿಗಳು ಆ ಪ್ರಕರಣದಲ್ಲಿ ಇದ್ದಾರೆ. ಇಲ್ಲಿ ಏನಾಗಿದೆ ಎಂದರೆ, ಮೇ ತಿಂಗಳಿನಲ್ಲಿ ಮರ್ಡರ್ ಆದರೂ ಕೂಡ ಇವತ್ತಿನವರೆಗೂ ಒಬ್ಬರ ಮೇಲೂ ಕ್ರಮ ತೆಗೆದುಕೊಂಡಿಲ್ಲ, ಒಬ್ಬರನ್ನೂ ಕೂಡ ಅರೆಸ್ಟ್ ಮಾಡಿಲ್ಲ. ಇಲ್ಲಿಯವರೆಗೂ ಯಾರನ್ನೂ ಕೂಡ ಬಂಧಿಸಿಲ್ಲ. ಇದಕ್ಕೆ ಗೃಹಮಂತ್ರಿಗಳು ಹೇಳಬಹುದು. ಇದಕ್ಕೆ ನಿರೀಕ್ಷಣಾ ಜಾಮೀನನ್ನು ಮೊದಲು ಜಿಲ್ಲಾ ಕೋರ್ಟಿನಲ್ಲಿ, ಸೆಶನ್ ಕೋರ್ಟಿನಲ್ಲಿ ಹಾಕಿದ್ದರು. ಅದು ಅಲ್ಲಿ ತಿರಸ್ಕೃತವಾಯಿತು. ಇಬ್ಬರು ಆರೋಪಿಗಳು ನಿರೀಕ್ಷಣಾ ಜಾಮೀನು ತೆಗೆದುಕೊಂಡು ಆ್ಯಂಟಿಸಿಪೇಟರಿ ಬೇಲ್ ಅವರಿಗೆ ಹೈಕೋರ್ಟ್‌ನಲ್ಲಿ ಮಂಜೂರಾಯಿತು. ಆ ಇಬ್ಬರೂ ಇವತ್ತು ನಿರೀಕ್ಷಣಾ ಜಾಮೀನಿನಲ್ಲಿ ಇದ್ದಾರೆ. ಇನ್ನು ಮೂವರು ಆರೋಪಿಗಳು ಏನಿದ್ದಾರೆ, ಅವರಿಗೆ ಯಾವ ಆ್ಯಂಟಿಸಿಪೇಟರಿ ಬೇಲ್ ಗ್ರಾಂಟ್ ಆಗಿಲ್ಲ. ಇವತ್ತಿನವರೆಗೂ ಅವರು ಓಪನ್ ಆಗಿ ಭಾಲ್ಕಿ ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಡ್ಡಾಡುತ್ತಿದ್ದಾರೆ. ಒಂದು ಕಾಂಟ್ರಾಕ್ಟ್ ಕೆಲಸದಲ್ಲಿ ಒಬ್ಬನು ಇವತ್ತು ಟೆಂಡರ್ ಹಾಕುತ್ತಿದ್ದಾನೆ. ಒಬ್ಬ ಆರೋಪಿ ಟೆಂಡರ್ ಹಾಕಿದ್ದಾನೆ. ಆದರೆ ಅವನನ್ನು ಕೂಡ ಅರೆಸ್ಟ್ ಮಾಡುವುದಕ್ಕೆ ಆಗಿಲ್ಲ. ಇವತ್ತು ಏನಾಗಿದೆ. ಎಂದರೆ, ನೀವು ಹೇಳಬಹುದು ಏನೆಂದರೆ ಹೈಕೋರ್ಟಿನಲ್ಲಿ ಅವರಿಗೆ ಆ್ಯಂಟಿಸಿಪೇಟರಿ ಬೇಲ್ ಗ್ರಾಂಟ್ ಆಗಿದೆ ಎಂದು. ಇಬ್ಬರು ಆರೋಪಿಗಳು ಯಾರು ಮಾಜಿ ಶಾಸಕರು ಇದ್ದಾರೆ ಮತ್ತು ಇನ್ನೊಬ್ಬ ಅವರ ಸಹೋದರ ಇದ್ದಾರೆ, ಅವರಿಗೆ ಆ್ಯಂಟಿಸಿಪೇಟರಿ ಬೇಲ್ ಗ್ರಾಂಟ್ ಆಗಿದೆ ಅದಕ್ಕೇ ನಾವು ಅವರನ್ನು

ಅರೆಸ್ಟ್ ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ಮಾತನ್ನು ತಾವು ಹೇಳಬಹುದು. ಆದರೆ ಮರ್ಡರ್ ಆಗಿದ್ದು ಓಪನ್ ಆಗಿಲ್ಲ. ಅದನ್ನು ಯಾರು ಮಾಡಿದ್ದಾರೆ ಎಂದು ಇಡೀ ಭಾಲ್ಕಿ ನಗರಕ್ಕೆ ಗೊತ್ತಿದೆ. ಅವರು ನಿರೀಕ್ಷಣಾ ಜಾಮೀನಿಗೆ ಅರ್ಜಿ ಹಾಕುವವರೆಗೂ ಓಪನ್ ಆಗಿ ಅಡ್ಡಾಡುತ್ತಿದ್ದರೂ ಅವರನ್ನು ಅರೆಸ್ಟ್ ಮಾಡಲಿಲ್ಲ. ಈಗ ಯಾರಿಗೆ ಆ್ಯಂಟಿಸಿಪೇಟರಿ ಬೇಲ್ ಇಲ್ಲ, ಆ ಮೂರು ಜನ ಆರೋಪಿಗಳು ಅವರು ದಿನನಿತ್ಯದ ಕೆಲಸಗಳನ್ನು ಮಾಡುತ್ತಿದ್ದಾರೆ. ಆದರೆ ಅವರನ್ನು ಇವತ್ತಿನವರೆಗೂ ಅರೆಸ್ಟ್ ಮಾಡಲಿಲ್ಲ. ಹೀಗಾಗಿ ಇವತ್ತು ರಾಜಕೀಯ ಕಾರ್ಯಕರ್ತನ ಕೊಲೆಯಾಗಿ ಕಳೆದ ಎರಡು ತಿಂಗಳಿನಿಂದ ಇವತ್ತಿಗೂ ಒಬ್ಬ ಆರೋಪಿಯನ್ನು ನೀವು ಬಂಧಿಸದಿದ್ದರೆ, ಅರೆಸ್ಟ್ ಮಾಡದಿದ್ದರೆ ಇದರ ಪರಿಣಾಮ ಏನಾಗುತ್ತದೆ ಎಂಬುದನ್ನು ದಯವಿಟ್ಟು ತಾವು ವಿಚಾರ ಮಾಡಬೇಕಾಗಿದೆ. ಇದು ಬಹಳ ಗಂಭೀರವಾದಂಥ ಪರಿಸ್ಥಿತಿ. ಅದಕ್ಕಾಗಿ ಇದರ ಬಗ್ಗೆ ಸರ್ಕಾರ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲಿಯವರೆಗೆ ನಮಗೆ ಏನು ಮಾಹಿತಿ ಬಂದಿದೆ ಎಂದರೆ ಈ ಕೊಲೆ ಪ್ರಕರಣದಲ್ಲಿ ರಾಜಕೀಯ ಪ್ರಮುಖ ವ್ಯಕ್ತಿಗಳು ಇರುವುದರಿಂದ ಆ ಕೊಲೆ ಪ್ರಕರಣವನ್ನು ಇವತ್ತು ಮುಚ್ಚಿಹಾಕುವಂಥ ಸಾಧ್ಯತೆ ನಡೆಯುತ್ತಿದೆ ಎನ್ನುವಂತಹ ಗುಮಾನಿ ಎಲ್ಲರನ್ನೂ ಕಾಡುತ್ತಿದೆ. ಅವರು ಆಡಳಿತ ಪಕ್ಷದವರು ಇದ್ದಾರೆ, ಆದ್ದರಿಂದ ಇದು ಮುಚ್ಚಿಹೋಗಿಬಿಡುತ್ತದೆ ಎಂದು ಸಾರ್ವಜನಿಕರು ಮಾತನಾಡುತ್ತಿದ್ದಾರೆ. ಸೆಕ್ಷನ್ 302ರ ಪ್ರಕಾರ ಕೇಸ್ ಹಾಕಿದ್ದಾರೆ. ನಾಳೆ ಆ ಸೆಕ್ಷನ್‌ನ್ನು ತೆಗೆದುಹಾಕುವಂಥಾದ್ದು ಮತ್ತು ಚಾರ್ಜ್‌ಶೀಟ್ ಹಾಕುವ ಮುಂಚೆಯೇ ಈ ಪ್ರಮುಖ ಆರೋಪಿಗಳು ಯಾರಿದ್ದಾರೆ, ಅವರ ಮೇಲಿನ ಕೇಸನ್ನು ತೆಗೆದುಹಾಕುವಂಥಾದ್ದು ಮತ್ತು ಆ 'ಬಿ' ರಿಪೋರ್ಟ್ ಅನ್ನು ತೆಗೆದುಬಿಡುವಂಥ ಕೆಲಸ ಆಗಬಹುದು ಎನ್ನುವಂಥ ಗುಮಾನಿ ಇವತ್ತು ಸಾರ್ವಜನಿಕರಲ್ಲಿ ಮೂಡಿದೆ. ಈ ರೀತಿಯಾದರೆ ಯಾರು ಆರೋಪಿಗಳಿಗೆ ಆ್ಯಂಟಿಸಿಪೇಟರಿ ಬೇಲ್ ಇಲ್ಲ, ಅವರನ್ನು ಅರೆಸ್ಟ್ ಮಾಡದೇ ಇರುವ ಪರಿಸ್ಥಿತಿ ಇದ್ದರೆ ಬಹುಶಃ ಅರಾಜಕತೆಯತ್ತ ರಾಜ್ಯ ಸರ್ಕಾರ ಹೋಗುತ್ತಿದೆ ಎಂದು ಹೇಳಬೇಕಾಗುತ್ತದೆ. ಆದ್ದರಿಂದ ಭಾಲ್ಕಿಯಲ್ಲಿ ಏನಾದರೂ ಶಾಸಕರು ಬರಬೇಕಾದರೆ, ಅಲ್ಲಿ ಜನರಿಗೆ ಸಮಾಧಾನ ಆಗಬೇಕಾದರೆ ತಕ್ಷಣ ಯಾರು ಆರೋಪಿಗಳು ಇದ್ದಾರೆ, ಅವರ ಮೇಲೆ ಕಾನೂನಿನ ಕ್ರಮವನ್ನು ತೆಗೆದುಕೊಂಡು ಅವರನ್ನು ಅರೆಸ್ಟ್ ಮಾಡುವಂಥ ಕೆಲಸ ಮೊಟ್ಟಮೊದಲು ಆಗಬೇಕಾಗಿದೆ. ಸರಿಯಾದ ವಿಚಾರಣೆ ನಡೆದು ಅದನ್ನು ಸಿ.ಒ.ಡಿ ಎನ್‌ಕ್ವೈರಿಗೆ ಕೊಟ್ಟಿದ್ದೀರೋ, ಮತ್ಯಾರಿಗೆ ಕೊಟ್ಟಿದ್ದೀದೋ ನಮಗೆ ಗೊತ್ತಿಲ್ಲ. ದಯಮಾಡಿ ಇದರ ಬಗ್ಗೆ ಸರಿಯಾಗಿ ವಿಚಾರಣೆ ಮಾಡಿಸಿ ಎಲ್ಲಾ ಆರೋಪಿಗಳ ಮೇಲೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುವ ಕೆಲಸ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೇ, ಅವರು ಏನು ವಿವರಗಳನ್ನು ಇಲ್ಲಿ ಹೇಳುತ್ತಿದ್ದಾರೆ, ಕೆಲವು ಜನ ಹೊರಗಿದ್ದಾರೆ. ಕೆಲವು ಜನ ಬೇಲ್ ಮೇಲೆ ಬಿಡಿಸಿಕೊಂಡು ಹೋಗಿದ್ದಾರೆ ಎನ್ನತಕ್ಕಂಥ ಕೆಲವು ಮಾತುಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇನ್ನು, ಎರಡನೆಯದಾಗಿ ಕೇಸ್ ಇನ್ವಿಸ್ಟಿಗೇಶನ್‌ನಲ್ಲಿ ಇದ್ದಾಗ ಯಾರು ಅಕ್ಯೂಸ್ಡ್, ಯಾರು ತಪ್ಪು ಮಾಡಿದ್ದಾರೆ ಎನ್ನತಕ್ಕಂಥಾದ್ದು ಸವಿಸ್ತಾರವಾಗಿ ಹೇಳುವುದಕ್ಕೆ ಕೂಡ ಕಷ್ಟವಾಗುತ್ತದೆ. ಇದರಿಂದ

ನಾಳೆ ಇನ್ವಿಸ್ಟಿಗೇಶನ್‌ಗೂ ಕೂಡ ತೊಂದರೆಯಾಗಬಹುದು. ಆದರೆ ಅವರು ಕೆಲವು ಮಾಹಿತಿಗಳನ್ನು ಕೇಳಿದ್ದಾರೆ. ಆ ಮಾಹಿತಿಗಳನ್ನು ನಾನು ನಾಳೆ ಒದಗಿಸಿಕೊಡುತ್ತೇನೆ. ಯಾರ್ಯಾರನ್ನು ಅರೆಸ್ಟ್ ಮಾಡಿದ್ದಾರೋ ಅಥವಾ ಜಾರ್ಜ್‌ಶೀಟ್ ಹಾಕಿದ್ದಾರೋ, ಅದು ಯಾವ ಸ್ಟೇಜ್‌ನಲ್ಲಿದೆ ಎನ್ನತಕ್ಕದ್ದು ನಾಳೆ ಅವರ ಗಮನಕ್ಕೆ ನಾನು ತರುತ್ತೇನೆ.

ಆ) ಬಾಗೇಪಲ್ಲಿ ಕ್ಷೇತ್ರದ ಗುಡಿಬಂಡೆ ತಾಲ್ಲೂಕಿನಲ್ಲಿ ಒಬ್ಬ ಹರಿಜನ ಬಾಲಕ ಆಕ್ಸಿಡೆಂಟ್‌ನಲ್ಲಿ ಮೃತಪಟ್ಟ ಪ್ರಕರಣದ ಹಿನ್ನೆಲೆಯಲ್ಲಿ ಸ್ಥಳೀಯ ಅಧಿಕಾರಿಗಳು ನಾಲ್ಕು ಹರಿಜನರ ಮನೆಗಳನ್ನು ಧ್ವಂಸ ಮಾಡಿರುವುದರಿಂದ ಉಂಟಾಗಿರುವ ಪರಿಸ್ಥಿತಿ ಬಗ್ಗೆ:-

ಶ್ರೀ ಎನ್. ಸಂಪಂಗಿ (ಬಾಗೇಪಲ್ಲಿ):- ಮಾನ್ಯ ಅಧ್ಯಕ್ಷರೇ, ಗುಡಿಬಂಡೆ ತಾಲ್ಲೂಕಿನಲ್ಲಿ ಮೊನ್ನೆ ಆಕ್ಸಿಡೆಂಟ್‌ನಲ್ಲಿ ಒಬ್ಬ ಹರಿಜನ ಬಾಲಕ ಮೃತಪಟ್ಟ ಹಿನ್ನೆಲೆಯಲ್ಲಿ ಒಂದು ದೊಡ್ಡ ಘಟನೆಯಾಗಿದೆ. ಈ ಗುಡಿಬಂಡೆ ಬಹಳ ಸಣ್ಣ ತಾಲ್ಲೂಕು. ಅಲ್ಲಿ ಪಟ್ಟಣದಲ್ಲಿ ಒಂದು ರಸ್ತೆ ಹೋಗುತ್ತದೆ. ಅದು 700 ಅಥವಾ 800 ಮೀಟರ್ ಇರತಕ್ಕಂಥ ಒಂದು ಮುಖ್ಯರಸ್ತೆ. ಅದು ಸುಮಾರು ವರ್ಷಗಳಿಂದ ಒತ್ತುವರಿ ಮಾಡಿರತಕ್ಕಂಥ ರಸ್ತೆ. ಆ ರಸ್ತೆಯಲ್ಲಿ ದೇವಸ್ಥಾನದಿಂದ ಹಿಡಿದು, ಮಸೀದಿಯಿಂದ ಹಿಡಿದು, ಮುನಿಸಿಪಾಲಿಟಿಯಿಂದ ಹಿಡಿದು ಎಲ್ಲಾ ಕೂಡ ಆ ರಸ್ತೆಯಲ್ಲೇ ಇರತಕ್ಕದ್ದು. ಆದರೆ ಬಹಳ ವರ್ಷಗಳಿಂದ ಒಂದು ಒತ್ತಡ ಇದೆ. ರಸ್ತೆ ಅತಿಕ್ರಮಣ ಮಾಡಿರತಕ್ಕವರನ್ನು ದೂರ ಸರಿಸಿ ರಸ್ತೆ ಅಗಲ ಮಾಡುವ ವಿಚಾರದಲ್ಲಿ ಬಹಳ ವರ್ಷಗಳಿಂದ ಒತ್ತಡ ಇದೆ. ಆದರೆ ಇದುವರೆಗೂ ಆ ರಸ್ತೆಯನ್ನು ಅಗಲ ಮಾಡತಕ್ಕಂಥ ಕೆಲಸಕ್ಕೆ ಯಾರೂ ಕೂಡ ಕೈಹಾಕಲಿಕ್ಕೆ ಹೋಗಿರಲಿಲ್ಲ. ಪಿ.ಡಬ್ಲ್ಯೂ.ಡಿ. ಇಲಾಖೆ ಮುಖಾಂತರ ಆ ರಸ್ತೆಯನ್ನು ಅಗಲಮಾಡದೆ, ಯಾರಿಗೂ ಕೂಡ ಅನಾನುಕೂಲವಾಗದಂತೆ ಬೈಪಾಸ್ ಮೂಲಕ ರಸ್ತೆಯಲ್ಲಿ ಓಡಾಡಲಿಕ್ಕೆ ಅವಕಾಶ ಮಾಡಬೇಕು ಎಂದು ಇಲಾಖೆಗೆ ಅನೇಕ ಅರ್ಜಿಗಳನ್ನು ಕೊಟ್ಟು ಅದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ, ಒಬ್ಬ ಹರಿಜನ ಹುಡುಗ ಸತ್ತುಹೋದಂಥ ವಿಚಾರದಲ್ಲಿ ಗುಡಿಬಂಡೆ ಪಟ್ಟಣಕ್ಕೆ ಬಂದಂಥ ಜಿಲ್ಲಾಧಿಕಾರಿಗಳು, ವಿಭಾಗಾಧಿಕಾರಿಗಳು ಮತ್ತು ತಹಸೀಲ್ದಾರರು, ಇವರು ಮೂವರು,

(ಮಾನ್ಯ ಸದಸ್ಯರಾದ ಶ್ರೀ ಎ.ಎಸ್. ಗುರುಸ್ವಾಮಿ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಕೂಡ, ಇಲ್ಲಿ ವಿಧಾನಸಭೆ ನಡೆಯುತ್ತಿದ್ದು ನಾವು ಇಲ್ಲಿ ಇರುವಂಥ ಸಂದರ್ಭದಲ್ಲಿ ನಮ್ಮ ಗಮನಕ್ಕೆ ತಾರದೆ ಜಿಲ್ಲಾಧಿಕಾರಿಗಳು ಅಲ್ಲಿರತಕ್ಕಂಥವರಿಗೆ ಒಂದು ಭರವಸೆಯನ್ನು ಕೊಟ್ಟು ಆಕ್ಸಿಡೆಂಟ್‌ನಲ್ಲಿ ಸತ್ತ ಮಗುವಿನ ಮನೆಯವರಿಗೆ ಸ್ವಲ್ಪ ಪರಿಹಾರ ಕೊಟ್ಟು ಹೋಗುವಾಗ, ಅಲ್ಲಿ ಕೆಲವರು ಈ ಒಂದು ರಸ್ತೆಯನ್ನು ಅಗಲ ಮಾಡುವುದಕ್ಕೆ ಒತ್ತಡ ತಂದಾಗ ಅವರಿಗೆ ಒಂದು ಭರವಸೆಯನ್ನು ಕೊಟ್ಟು, ಶಾಸಕರಾದಂಥ ಮತ್ತು ಜನಪ್ರತಿನಿಧಿಗಳಾದಂಥ ನಮಗೆ ತಿಳಿಸದೆ ರಸ್ತೆ ಅಗಲ ಮಾಡುವುದಕ್ಕೆ ಆದೇಶವನ್ನು ಕೊಟ್ಟರು. ಆದೇಶವನ್ನು ಕೊಟ್ಟು ಅಥವಾ ಆದೇಶವನ್ನು ಕೊಡುವ ಮುಂಚೆ ಜಿಲ್ಲಾಧಿಕಾರಿಗಳು, ವಿಭಾಗಾಧಿಕಾರಿಗಳು, ತಹಸೀಲ್ದಾರರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಯೋಚನೆ ಮಾಡಬೇಕಾಗಿತ್ತು. ಆದರೆ ಇವರು ಯಾರೂ ಕೂಡ ಮುನ್ನಾಲೋಚನೆ ಇಲ್ಲದೆ ಆ ರಸ್ತೆಯನ್ನು ತೆರವು ಮಾಡುವುದಕ್ಕೆ ಆದೇಶವನ್ನು ಕೊಟ್ಟು ರಸ್ತೆಯ ಪ್ರಾರಂಭದಲ್ಲಿ ಇರತಕ್ಕಂಥ